ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ವಿರಾಜಪೇಟೆ

**ಉಪಸ್ಥಿತರುಃ ಸಂತೋಷ ಕೊಠಾರಿ,**
**ಬಿ.ಎ.ಎಲ್., ಎಲ್.ಎಲ್.ಬಿ.,**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ವಿರಾಜಪೇಟೆ**

# ಸಿ. ಸಿ. ನಂ. 1004/2021

ಪಿರ್ಯಾದಿಃ ಶ್ರೀ ಕದನೂರು ಭಗವತಿ ದೇವಸ್ಥಾನ
ಪ್ರತಿನಿಧಿಸುವವರು ಅಮ್ಮುಣಿಚಂಡ ರವಿ ಉತ್ತಪ್ಪ, ತಂದೆಃ ಪೌತಿ ನಾಣಯ್ಯ,
ಪ್ರಾಯಃ 67 ವರ್ಷ,
ಮತ್ತು ಹಾಲಿ ಕಾರ್ಯದರ್ಶಿಗಳು,
ಶ್ರೀ ಪೆಮ್ಮಂಡ ಪ್ರಸಾದ್, ತಂದೆಃ ಕುಶಾಲಪ್ಪ, ಪ್ರಾಯ 67 ವರ್ಷ,
ಇಬ್ಬರ ವಾಸಃ ಕದನೂರು ಗ್ರಾಮ ಮತ್ತು ಅಂಚೆ,
ವಿರಾಜಪೇಟೆ ತಾಲ್ಲೂಕು,ಕೊಡಗು ಜಿಲ್ಲೆ.

(ಶ್ರೀ ಸಿ.ಕೆ.ಪೂವಯ್ಯ , ವಕೀಲರು,ವಿರಾಜಪೇಟೆ.)

***ವಿರುದ್ಧ***

ಆರೋಪಿಃ ಶ್ರೀ ಕಾಳಮಂಡ ಬೇಬಿ ಚೆಂಗಪ್ಪ, ತಂದೆಃ ತಿಮ್ಮಯ್ಯ, 49 ವರ್ಷ,
ವಾಸಃ ಕದನೂರು ಗ್ರಾಮ ಮತ್ತು ಅಂಚೆ,
ವಿರಾಜಪೇಟೆ ತಾಲ್ಲೂಕು,ಕೊಡಗು ಜಿಲ್ಲೆ.

(ಶ್ರೀ ಬಿ.ಎನ್.ಜಗದೀಶ್, ವಕೀಲರು,ವಿರಾಜಪೇಟೆ.)

**::ದಂಡ ಪ್ರಕ್ರಿಯಾ ಸಂಹಿತೆ ವಿಧಿ 313 (1)(ಬಿ) ರಡಿ ದಾಖಲಿಸಿದ ಆರೋಪಿತರ ಹೇಳಿಕೆ ::**

ಪ್ರಶ್ನೆಃ 1 ಪಿರ್ಯಾದುದಾರರ ಸಾಕ್ಷ್ಯವನ್ನು ತಿಳಿದುಕೊಂಡಿರುವಿರಾ?

ಉತ್ತರಃ

ಪ್ರಶ್ನೆಃ 2 ಪ್ರಾಸಾ-1 ಶ್ರೀ ಕದನೂರು ಭಗವತಿ ದೇವಸ್ಥಾನ ಪರವಾಗಿ ಪ್ರತಿನಿಧಿಸುವವರು ಅಮ್ಮುಣಿಚಂಡ ರವಿ ಉತ್ತಪ್ಪ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಆರೋಪಿಯಾದ ಕಾಳಮಂಡ ಬೇಬಿ ಚೆಂಗಪ್ಪ ರವರು ದೇವಾಲಯದ ಅಭಿವೃದ್ಧಿ, ಉಸ್ತುವಾರಿ ಹಾಗೂ ಲೆಕ್ಕಪತ್ರಗಳನ್ನು ನೋಡಿಕೊಳ್ಳುತ್ತಿದ್ದು, ಗ್ರಾಮಸ್ಥರೆಲ್ಲರೂ ಹಿಂದಿನ ಹಣಕಾಸು ಲೆಕ್ಕಪತ್ರದ ತಖ್ತೆಯನ್ನು ನೀಡುವಂತೆ ಕೇಳಿದಾಗ ರೂ.10,46,079/- ಕಡಿಮೆ ಇದ್ದದ್ದನ್ನು

ಆರೋಪಿಯು ಹಾಗೂ ಮಾಜಿ ಕಾರ್ಯದರ್ಶಿ ಶ್ರೀ ಅರ್ನೇಕಂಡ ಶ್ಯಾಮ್ ನಂಜಪ್ಪ ಒಪ್ಪಿ ಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಈ ಬಗ್ಗೆ ನೀವೇನು ಹೇಳಬಯಸುವಿರಿ?

ಉತ್ತರಃ

ಪ್ರಶ್ನೆಃ 3 ಫ್ರಾಸಾ 1 ರವರು ಮುಂದುವರೆದು, ಸದರಿ ಹಣವನ್ನು ಭರ್ತಿ ಮಾಡಿಕೊಡುವುದಾಗಿ ಆರೋಪಿಯಾದ ನೀವು ಚೆಕ್ಕನ್ನು ನೀಡಿದ್ದು ಚೆಕ್ ನಂಬರ್ 087458 ದಿನಾಂಕ 10.06.2021ರಂದು ರೂ.2,50,000/- ನಮೂದಿಸಿ ಕಾರ್ಪೋರೇಷನ್ ಬ್ಯಾಂಕ್/ಯೂನಿಯನ್ ಬ್ಯಾಂಕ್, ವಿರಾಜಪೇಟೆ ಶಾಖೆಯ ತಮ್ಮ ಖಾತೆಗೆ ಸಂಬಂಧಿಸಿದ ಚೆಕ್‌ನ್ನು ನೀಡಿದ್ದು, ಅದನ್ನು ನಗದೀಕರಿಸಿಕೊಂಡು ಹಣವನ್ನು ಮರುಪಾವತಿ ಮಾಡಿಕೊಳ್ಳಬೇಕೆಂದು ಆರೋಪಿ ನನಗೆ ತಿಳಿಸಿರುತ್ತಾರೆ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳಬಯಸುವಿರಿ?

ಉತ್ತರಃ

ಪ್ರಶ್ನೆಃ 4 ಫ್ರಾಸಾ 1 ರವರು ಮುಂದುವರೆದು, ನಿಮ್ಮ ಕೋರಿಕೆಯ ಮೇರೆಗೆ ಸದರಿ ಚೆಕ್‌ನ್ನು ಪಟ್ಟಣ ಸಹಕಾರ ಬ್ಯಾಂಕ್, ವಿರಾಜಪೇಟೆ ಶಾಖೆ ಮುಖಾಂತರ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ವಿರಾಜಪೇಟೆ ಶಾಖೆಯ ಮುಖಾಂತರ ನಗದೀಕರಿಸಲು ಸಲ್ಲಿಸಿದೆ ಆದರೆ ಆರೋಪಿಯ ಬ್ಯಾಂಕ್‌ನವರು" Instrument not in use" ಎಂಬ ಕಾರಣ ನೀಡಿ ದಿನಾಂಕ 30.06.2021ರಂದು ಚೆಕ್‌ನ್ನು ಅಮಾನ್ಯಗೊಳಿಸಿ ಮೆಮೋದೊಂದಿಗೆ ಹಿಂತಿರುಗಿಸಿರುತ್ತಾರೆ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳಬಯಸುವಿರಿ?

ಉತ್ತರಃ

ಪ್ರಶ್ನೆಃ 5 ಫ್ರಾಸಾ 1 ರವರು ಮುಂದುವರೆದು, ಚೆಕ್ ಅಮಾನ್ಯಗೊಂಡು ಮರಳಿ ಬಂದ ಬಳಿಕ ದಿನಾಂಕಃ 02.07.2021ರಂದು ಆರೋಪಿಗೆ ತನ್ನ ವಕೀಲರ ಮೂಲಕ ನೋಂದಾಯಿತ ಅಂಚೆಯಲ್ಲಿ ನೋಟೀಸ್ ಕಳುಹಿಸಿ ಚೆಕ್‌ನಲ್ಲಿನ ಹಣವನ್ನು ಪಾವತಿ ಮಾಡಬೇಕೆಂದು ತಗಾದೆ ಮಾಡಿರುತ್ತೇನೆ ಆದರೂ ಸಹಾ ಆರೋಪಿಯು ಚೆಕ್‌ನ ಬಾಬ್ತು ಹಣವನ್ನು ಪಾವತಿಸಿರುವುದಿಲ್ಲ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳಬಯಸುವಿರಿ?

ಉತ್ತರಃ

ಪ್ರಶ್ನೆ: 6 ಫ್ರಾಸಾ 1 ರವರು ಮುಂದುವರೆದು, ಆರೋಪಿ ನನಗೆ ವಂಚನೆ ಮಾಡುವ ಉದ್ದೇಶದಿಂದ, ತಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲದೇ ಇದ್ದರೂ ಚೆಕ್‌ನ್ನು ನೀಡಿರುತ್ತಾರೆ ಮತ್ತು ಚೆಕ್ ಹಣವನ್ನು ಪಾವತಿಸಿರುವುದಿಲ್ಲ ಎಂದು ತಿಳಿಸಿ ನಿಪಿ-1 ರಿಂದ ನಿಪಿ-6 ನ್ನು ಗುರುತಿಸಿಕೊಂಡಿದ್ದಾರೆ. ಈ ಬಗ್ಗೆ ನೀವೇನು ಹೇಳಬಯಸುವಿರಿ?

ಉತ್ತರಃ

ಪ್ರಶ್ನೆ: 7 ಮೇಲೆ ಓದಿ ಹೇಳಲಾದ ಪ್ರಶ್ನೆಗಳು ನಿಮಗೆ ಅರ್ಥವಾಯಿತೆ?

ಉತ್ತರಃ

ಪ್ರಶ್ನೆ: 8 ಈ ಮೊಕದ್ದಮೆ ಬಗ್ಗೆ ನೀವೇನಾದರೂ ಹೇಳುವುದು ಇದೆಯೇ?

ಉತ್ತರಃ

ಪ್ರಶ್ನೆ: 9 ನಿಮ್ಮ ಪರವಾಗಿ ಅಭಿರಕ್ಷಣಾ ಸಾಕ್ಷ್ಯ ಇದೆಯೇ? ಇದ್ದರೆ ಮಂಡಿಸಿ.

ಉತ್ತರಃ

(ಮೇಲಿನ ಎಲ್ಲಾ ಪ್ರಶ್ನೆಗಳನ್ನು ಆರೋಪಿಗೆ ಓದಿ, ತಿಳಿ ಹೇಳಿದ ನಂತರ ಆರೋಪಿ ಅದನ್ನು ಅರ್ಥೈಸಿಕೊಂಡು ನಂತರ ನೀಡಿದ ಉತ್ತರಗಳನ್ನು ನಾನೇ ಸ್ವತಃ ದಾಖಲು ಮಾಡಿದ್ದೇನೆ. ಸದರಿ ದಾಖಲೆಯು ಸರಿಯಾದುದು ಮತ್ತು ನಿಜವಾದುದು ಎಂದು ದೃಡೀಕರಿಸುತ್ತೇನೆ.)

(ಸಂತೋಷ ಕೊಠಾರಿ )

ದಿನಾಂಕಃ20.06.2024.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ
ವಿರಾಜಪೇಟೆ.